# ಮಾನವೀಯತೆ ಮೆರೆದ ಸಭಾಪತಿ ಬಸವರಾಜ ಹೊರಟ್ಟಿ ದಂಪತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಶಹಪುರಪೇಟೆಯ ಬಸವೇಶ್ವರ ನಗರದ ವಿಶ್ವನಾಥ್ ಕಾಟವ ಕುಟುಂಬ ತಮ್ಮ ಮಗನನ್ನು ತುಮಕೂರಿನ ಪ್ರುಡೆನ್ಸಿ ಇಂಟರ್ನ್ಯಾಷನಲ್ ಸ್ಕೂಲ್‌ನಲ್ಲಿ ಎಂಟನೇ ತರಗತಿಗೆ ಓದಿಸುತ್ತಿದ್ದು, ಪಾಲಕರ ಸಭೆಯಿರುವ ಪ್ರಯುಕ್ತ ಪ್ರಿಯಾಂಕಾ, ಗಾಯತ್ರಿ, ಇಬ್ಬರೂ ಸಹೋದರಿಯರು ತಮ್ಮ ತಮ್ಮನನ್ನು ಬಿಡಲು ತುಮಕೂರಿಗೆ ತೆರಳುತ್ತಿದ್ದರು. ಚಿತ್ರದುರ್ಗದ ಬಳಿ ಬೇರೊಂದು ಕಾರು ಇವರ ಕಾರಿಗೆ ಡಿಕ್ಕಿ ಹೊಡೆದು, ಗಾಯತ್ರಿ ಹಾಗೂ



ಅವರ ತಮ್ಮ ದಿವಿತ್‌ನನಿಗೆ ಗಂಭೀರ ಗಾಯವಾಗಿತ್ತು.

ಇದೇ ಸಮಯಕ್ಕೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಬೆಂಗಳೂರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮುಗಿಸಿ ಹುಬ್ಬಳ್ಳಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ಘಟನೆಯನ್ನು ಕಂಡು ತಕ್ಷಣ ಸ್ಪಂದಿಸಿ ಗಾಯಾಳುಗಳನ್ನ ಚಿತ್ರದುರ್ಗದ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸಲು ಏರ್ಪಾಟು ಮಾಡಿದರು. ನಂತರ ಚಿತ್ರದುರ್ಗ ಹಾಗೂ ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಿ ಕಾಳಜಿ ವಹಿಸುವಂತೆ ಹಾಗೂ ಗದಗಿಗೆ ಅವರನ್ನು ಸುರಕ್ಷಿತವಾಗಿ ಕಳಿಸಲು ವ್ಯವಸ್ಥೆ ಮಾಡಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆಯನ್ನು ಕಂಡು ಅಲ್ಲಿ ಸೇರಿದ ಜನ ಮೆಚ್ಚುಗೆ ವ್ಯಕ್ತಪಡಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆ, ಸಮಾಜಮುಖಿ ಕಾಳಜಿ ಎಲ್ಲರದಾಗಲಿ ಎಂದು ಆಶಯ ವ್ಯಕ್ತಪಡಿಸಿದರು ಎಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

# ಮಾನವೀಯತೆ ಮೆರೆದ ಸಭಾಪತಿ ಬಸವರಾಜ ಹೊರಟ್ಟಿ ದಂಪತಿಗಳು



**ಧಾರವಾಡ:** ಗದುಗಿನ ಶಹಪುರಪೇಟೆಯ ಬಸವೇಶ್ವರ ನಗರದ ವಿಶ್ವನಾಥ್ ಕಾಟವ ಕುಟುಂಬ ತಮ್ಮ ಮಗನಾದ ದಿವ್ಯತ್ವ ನನ್ನು ತುಮಕೂರಿನ ಪ್ರುಡೆನ್ಸಿ ಇಂಟರ್ನ್ಯಾಷನಲ್ ಸ್ಕೂಲ್‌ನಲ್ಲಿ ಎಂಟನೇ ತರಗತಿಗೆ ಓದಿಸುತ್ತಿದ್ದು ನಾಳೆ ಪಾಲಕರ ಸಭೆ ಇದ್ದ ಪ್ರಯುಕ್ತ ಪ್ರಿಯಾಂಕಾ, ಗಾಯತ್ರಿ, ಇಬ್ಬರೂ ಸಹೋದರಿಯರು ತಮ್ಮ ತಮ್ಮನನ್ನು ಬಿಡಲು ತುಮಕೂರಿಗೆ ತೆರಳುತ್ತಿದ್ದರು. ಚಿತ್ರದುರ್ಗದ ಬಳಿ ಬೇರೊಂದು ಕಾರು ಇವರ ಕೆಎ 06.ಎಂಎ 9717 ರೆನಾಲ್ಟ್ ಟ್ರೈಬರ ಕಾರಿಗೆ ಡಿಕ್ಕಿ ಹೊಡೆದ ನಿಮಿತ್ಯ ಗಾಯತ್ರಿ ಅವರಿಗೆ ಹಾಗೂ ಅವರ ತಮ್ಮ ದಿವಿತ್ವ ಅವನಿಗೆ ಗಂಭೀರ ಗಾಯವಾಗಿತ್ತು.

ಇದೇ ಸಮಯಕ್ಕೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಬೆಂಗಳೂರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮುಗಿಸಿ ಹುಬ್ಬಳ್ಳಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ಘಟನೆಯನ್ನು ಕಂಡು ತಕ್ಷಣ ಸ್ಪಂದಿಸಿ ಗಾಯಾಳುಗಳನ್ನ ಚಿತ್ರದುರ್ಗದ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸಲು ಏರ್ಪಾಟು ಮಾಡಿದರು. ನಂತರ ಚಿತ್ರದುರ್ಗ ಹಾಗೂ ಗದಗ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಈ ಮಾಹಿತಿಯನ್ನು ತಿಳಿಸಿ ಕಾಳಜಿ ವಹಿಸುವಂತೆ ಹಾಗೂ ಗದಗಿಗೆ ಅವರನ್ನು ಸುರಕ್ಷಿತವಾಗಿ ಕಳಿಸಲು ವ್ಯವಸ್ಥೆ ಮಾಡಿದರು. ಗಯಾಳುಗಳಿಗೆ ಧೈರ್ಯ ತುಂಬಿ ಸಾಂತ್ವನ ಹೇಳಿ ತಮ್ಮ ವೈಯಕ್ತಿಕ ಫೋನ್ ನಂಬರ್ ಅನ್ನು ನೀಡಿ ಏನಾದರೂ ತೊಂದರೆ ಆದರೆ ನನ್ನನ್ನು ಸಂಪರ್ಕಿಸಿ ಎಂದು ಹೇಳಿ ಹುಬ್ಬಳ್ಳಿಗೆ ತೆರಳಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆಯನ್ನು ಕಂಡು ಅಲ್ಲಿ ಸೇರಿದ ಜನ ಸಾಕಷ್ಟು ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆ ಸಮಾಜಮುಖಿ ಕಾಳಜಿ ಇತರರಿಗೆ ಆದರೆ ಆಗಲಿ ಎಂದು ಆಶಯ ವ್ಯಕ್ತಪಡಿಸಿದರು. ಎಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.